ತಾರೀಖು 18ನೇ ಜನವರಿ 1896ನೇ ಇಸವಿ.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊರಟಗೆರೆ ಸಬ್ ತಾಲ್ಲೂಕು ಚನ್ನರಾಯದುರ್ಗ ಸಮ್ಮತು ಹೊಲ್ತಾಳು ಬಳಿ ಸರ್ವೇ 38ನೇ ನಂಬರಿನಲ್ಲಿರತಕ್ಕ ಕಲ್ಲಿನ ಬಾಬತು ಮಂಟಪ, ಭೂವಿ ಪಗ್ಗೆರೆ ಪರಸ್ಥಳೀಕರ ಉಪಯೋಗಕ್ಕೆ ಅನುಕೂಲವಾಗಿರುವ ಕಟ್ಟಡವನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರ ತನಿಖೆಗೆ ಬಳಪಡಿಸಿಕೊಂಡು ಮುನಾಫರ್‌ಖಾನೆ ಯೆಂಬ ಹೆಸರಿಟ್ಟು ಕೊಂಜೆ ಕಾಮಗಾರಿ ಮಾಡಿಸಬೇಕೆಂದು ತಾತ್ಪರ್ಯ ಇಟ್ಟುಕೊಂಡಿರುತ್ತಾರೆ. ಇದನ್ನ ಕಟ್ಟಿಸಿರತಕ್ಕವರು ಇಂತವರೆಂಬದಾಗಲಿ, ಇವರ ವಾರಸ್ದಾರರಾಗಲಿ ಈಗ್ಯೆ ಸುಮಾರು 40, 50 ವರುಷದ ಲಾಗಾಯತು ಇರುವಂತೆ ಗೊತ್ತಾಗಿಲ್ಲ. ಆದ್ದರಿಂದ ಈ ಲಾಗಾಯ್ತು ಮೂರು ತಿಂಗಳೊಳಗಾಗಿ ಈ ಕಟ್ಟಡಕ್ಕೆ ಹಾಗೆ ವಾರಸ್ದಾರರಾದವರು ಯಾರಾದರೂ ಯಿದ್ದ ಪಕ್ಷದಲ್ಲಿ ನಮ್ಮ ರೂಬರೂ ಹಾಜರಾಗಿ ತಮ್ಮ ಹಕ್ಕನ್ನು ದೃಢಪಡಿಸಿಕೊಳ್ಳಬಹುದು. ಇಲ್ಲವಾದರೆ ನಂತರ ಬರುವ ತಕರಾರಿಗೆ ಅವಕಾಶವಿಲ್ಲವಾದ್ದು, ತಿಳಿಯುವದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಪ್ರೆಸಿಡೆಂಟ್.

---

## ಕೋಲಾರ ಡಿಸ್ಟ್ರಿಕ್ಟ್.

### ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 12ನೇ ಫಿಬ್ರವರಿ 1896.

1. ಕಂದಾಯದ ಬಾಕಿದಾರನಾದ ರಮ್ಯವರಾಜಾರ್ ಮೈನರ್, ಗಾರ್ಡಿಯನ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜಮೀರ್ಕಂದಾಯದ ಬಾಕಿಗಾಗಿ ಘಾರ್ಫಿಟ್ಟಾಗಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ತಾಲ್ಲೂಕು ಚಿಕ್ಕಬಳ್ಳಾಪುರದಲ್ಲಿ ಸಬ್ ಡಿವಿಜ್ ಆಫಿಸರರ ರೂಬರೂ 1896ನೇ ಮಾರ್ಚಿ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಯೆಲ್ ಮೇರಿಗೆ 1,412—8—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂ.ಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ, ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೊಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫುನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು, ಹರಾಜು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಪುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಪಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

170

## ಸ್ವತ್ತಿನ ತಪಸೀಲ್.

| ತಾಲ್ಲೂಕು. | ಹೋಬಳಿ. | ಗ್ರಾಮ. | ಬಾಕಿದಾರರ ಹೆಸರು. | ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು. | ಅಂದಾಜಿ ಕಿಮ್ಮತ್ತು. | ಜಮೀನು. ನಂಬರ್ ಅಥವಾ ಜಮೀನಿನ ಹೆಸರು. | ಖುಷ್ಕೀ ತರೀ ಅಥವಾ ಬಾಗಾಯತು. | ವಿಸ್ತೀರ್ಣ. | ಆಕಾರ. | ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | ರೂ. ಆ. ಪೈ. | | | ಎಕರೆ. ಗು. | ರೂ. ಆ. ಪೈ. | ರೂ. ಆ. ಪೈ. |
| ಚಿಕ್ಕಬಳ್ಳಾಪುರ. | ಚಿಕ್ಕಬಳ್ಳಾಪುರ. | ಸರ್ವಮಾನ್ಯ ಜಾತವಾರ. | ರಮ್ಯವರಾಚಾರ್ ಮೈನರ್, ಗಾರ್ಡಿಯನ್ ತಾಯಿ ವೆಂಕಟಲಕ್ಷ್ಮಮ್ಮ. | .. | .. .. .. | ಸರ್ವಮಾನ್ಯ ಗ್ರಾಮದಲ್ಲಿ ಬಾಕಿದಾರ್ರಿಗೆ ಇರುವ ಹಿಶ್ಶೆ. | ಖುಷ್ಕೀ | 392 6 | 347 0 0 | |
| | | | | | | | ತರೀ | 101 7 | 235 1 0 | 1,048 11 0 |
| | | | | | | | ಬಾಗಾಯತು | 25 16 | 119 0 0 | ಬಡ್ಡಿ |
| | | | | | | | ಪರಂಪೋಕು | 208 39 | 3 4 0 | 363 13 4 |
| | | | | | | | ಟೋಟಲ್ | 727 28 | 704 5 0 | 1,412 8 4 |
| | | | | | | | ಸಾಲಿಯಾನಾ ಸರ್ಕಾರಕ್ಕೆ ಬರಬೇಕಾದ್ದು | | | |
| | | | | | | | ಕ್ವಿಟ್ರೆಂಟ್ | .. .. | 88 0 0 | |
| | | | | | | | ಸೆಸ್ | .. .. | 44 0 2 | |
| | | | | | | | | | 132 0 2 | |

ಈ ಹರಾಜಿಗೆ ಇನಾಂದಾರರು ಮಾಡಿರುವ ಭೋಗ್ಯ ವಗೈರೆ ಪರಭಾರೆ ಬಾಧಿಸುವದಿಲ್ಲ.

ಸಿ. ಮಾದಯ್ಯ, ಡೆಪ್ಯುಟಿ ಕಮ್ಮಿಷನರ್.

## ಮೈಸೂರ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 353.

ಮೃತಪಟ್ಟ ಐಯ್ಯಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಧರಣಯ್ಯ, 2ನೇ ಐಯ್ಯಂಣ, 3ನೇ ಪದ್ಮರಾಜು ಮೈನರ್‌ಗಳು, ಇವರುಗಳ ಗಾರ್ಡಿಯನ್ ಬ್ರಹ್ಮಯ್ಯನು, ಮೃತಪಟ್ಟ ಸದರೀ ಐಯ್ಯಂಣನವರಿಗೆ ಮೈನರ್‌ಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲದ ತಾಲ್ಲೂಕು ಬೆಳ್ಳೂರು ಸ್ಥಳದ ಸದರೀ ಬ್ರಹ್ಮಯ್ಯನವರು, ಯಡತೊರೆ ತಾಲ್ಲೂಕು ಸಾಲಗ್ರಾಮದ ವಾಸಸ್ಥರಾಗಿ ಮೃತಪಟ್ಟ ಐಯ್ಯಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಬ್ರಹ್ಮಯ್ಯನವರ ಅರ್ಜಿಯನ್ನು ಸನ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಐಯ್ಯಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 354.

ಮೃತಪಟ್ಟ ಭುಜಬಲಸ್ವಾಮಿರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಪದ್ಮಮ್ಮನವರು, ಮೃತಪಟ್ಟ ಸದರೀ ಭುಜಬಲಸ್ವಾಮಿರಿಗೆ ಹಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನರಾಯಪಟ್ಣದ ತಾಲ್ಲೂಕು ಶ್ರವಣ ಬಳಗುಳ ಸ್ಥಳದ ಸದರೀ ಪದ್ಮಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಭುಜಬಲಸ್ವಾಮಿರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪದ್ಮಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭುಜಬಲಸ್ವಾಮಿರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಫಿಬ್ರವರಿ ತಿಂಗಳ 18ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟು ಜಡ್ಜ್.